## ಬೆಟ್ಟಿಂಗ್ ವೆಬ್‌ಸೈಟ್, ಆ್ಯಪ್ ವಿರುದ್ಧ ಪ್ರಕರಣ

ಬೆಂಗಳೂರು: 'ರಾಜ್ಯ ಸೈಬರ್ ಕಮಾಂಡ್ ಘಟಕ'ವು (ಸಿಸಿಯು) ಇಂಡಿಯನ್ ಸೈಬರ್ ಕ್ರೈಂ ಕೋ ಆರ್ಡಿನೇಷನ್ ಸೆಂಟರ್ (ಐ4ಸಿ) ನೆರವಿನೊಂದಿಗೆ ಕಾರ್ಯಾಚರಣೆ ನಡೆಸಿ, ದೇಶದಾದ್ಯಂತ ಅಕ್ರಮ ಬೆಟ್ಟಿಂಗ್ ವೆಬ್‌ಸೈಟ್‌ಗಳು, ಮೊಬೈಲ್ ಅಪ್ಲಿಕೇಶನ್‌ಗಳು ಹಾಗೂ 8,750 ವಂಚಕ ಬೆಟ್ಟಿಂಗ್ ಯುಆರ್‌ಎಲ್‌ಗಳ ಜಾಲವನ್ನು ಭೇದಿಸಿದೆ.

ಗುಪ್ತಚರ ಮಾಹಿತಿ ಆಧರಿಸಿ ತನಿಖೆ ನಡೆಸಿದ ವಿಶೇಷ ಸೈಬರ್ ತಂಡಗಳು, ಆನ್‌ಲೈನ್ ಕ್ರಿಕೆಟ್ ಬೆಟ್ಟಿಂಗ್ ವೇದಿಕೆಗಳನ್ನು ನಿರ್ವಹಿಸುತ್ತಿದ್ದ ಸಂಘಟಿತ ಗುಂಪುಗಳನ್ನು ಗುರುತಿಸಿವೆ. ಈ ವೇದಿಕೆಗಳು ಮಿರರ್ ಡೊಮೇನ್, ಸಬ್ ಡೊಮೇನ್‌ಗಳ ಮತ್ತು ನಕಲಿ ಯುಆರ್‌ಎಲ್‌ಗಳ ಮೂಲಕ ಕಾರ್ಯನಿರ್ವಹಿಸುತ್ತಿರುವುದು ಪತ್ತೆಯಾಗಿದೆ.

ಈ ಸಂಬಂಧ ಮಾಹಿತಿ ತಂತ್ರಜ್ಞಾನ ಕಾಯ್ದೆ ಸೆಕ್ಷನ್ 66ಸಿ, 66ಡಿ ಹಾಗೂ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಸೆಕ್ಷನ್ 318 (4) ಮತ್ತು 319 (2) ಅಡಿ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗಿದೆ ಎಂದು ಸಿಸಿಯು ಪೊಲೀಸ್ ಮಹಾ ನಿರ್ದೇಶಕ ಪ್ರಣವ್ ಮೊಹಾಂತಿ ತಿಳಿಸಿದ್ದಾರೆ.

ಅಕ್ರಮ ಬೆಟ್ಟಿಂಗ್ ಜಾಲಗಳ ಪರಿಣಾಮ ಹಲವರಿಗೆ ಆರ್ಥಿಕ ನಷ್ಟ ಉಂಟಾಗುವುದನ್ನು ತಡೆಯಲಾಗಿದೆ.

ಬೆಟ್ಟಿಂಗ್‌ಗೆ ತೊಡಗಿಸುತ್ತಿದ್ದ ಹಣದ ಮೂಲ, ಬೆಟ್ಟಿಂಗ್ ನಿರ್ವಾಹಕರ ಪತ್ತೆ ಮಾಡುವುದು ಸೇರಿದಂತೆ ತಾಂತ್ರಿಕ ತನಿಖೆಗಳು ಪ್ರಗತಿಯಲ್ಲಿವೆ.

# 'ಬಸವಣ್ಣನ ತತ್ವ ಅಳವಡಿಸಿಕೊಳ್ಳಿ'

ಪ್ರಜಾವಾಣಿ ವಾರ್ತೆ



ಜಾಗತಿಕ ಲಿಂಗಾಯತ ಮಹಾಸಭಾದ ಬೆಂಗಳೂರು ಜಿಲ್ಲಾ ಘಟಕ ನಗರದಲ್ಲಿ ಆಯೋಜಿಸಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ವಕೀಲ ಸಿ.ಎಸ್.ದ್ವಾರಕಾನಾಥ್ ಮತ್ತು ಕೋಮಲ ದ್ವಾರಕಾನಾಥ್ ಅವರನ್ನು ಸನ್ಮಾನಿಸಲಾಯಿತು. (ಎಡದಿಂದ) ಗಂಗಾಂಬಿಕೆ ಮಲ್ಲಿಕಾರ್ಜುನ, ಬಸವರಾಜ ಹೊರಟ್ಟಿ, ಶಿವರುದ್ರ ಸ್ವಾಮೀಜಿ, ಎಸ್.ಎಂ ಕೆಂಪಗೌಡರ್, ಎಸ್.ಎಂ.ಜಾಮದಾರ್ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

ಬೆಂಗಳೂರು: 'ಬಸವಣ್ಣ ಜಾತಿ, ಭೇದವನ್ನು ಮಾಡದೇ ಎಲ್ಲರನ್ನೂ ಸಮಾನವಾಗಿ ನೋಡಿದ ಸಾಂಸ್ಕೃತಿಕ ನಾಯಕ. ಅವರ ವಚನದಲ್ಲಿನ ತತ್ವಗಳು ಬದುಕಿನಲ್ಲಿ ಬದಲಾವಣೆಗೆ ದಾರಿಯಾಗಲಿವೆ' ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಜಾಗತಿಕ ಲಿಂಗಾಯತ ಮಹಾಸಭಾದ ಬೆಂಗಳೂರು ಜಿಲ್ಲಾ ಘಟಕ ಆಯೋಜಿಸಿದ್ದ ಬಸವ ಜಯಂತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

'ಬಸವಣ್ಣ ತಮ್ಮ ಚಿಂತನೆ, ವಚನಗಳ ಮೂಲಕವೇ ನಿಜವಾದ ಸಾಂಸ್ಕೃತಿಕ ನಾಯಕ ಎನ್ನಿಸಿದರು. ಅವರಿಗೆ ಎರಡು ವರ್ಷದ ಹಿಂದೆ ಸಾಂಸ್ಕೃತಿಕ ನಾಯಕ ಎನ್ನುವ ಗೌರವ ನೀಡಿದ್ದನ್ನು ಮೆಚ್ಚಲೇಬೇಕು. ಸಮಾನತೆ ತತ್ವ ಅಳವಡಿಸಿಕೊಂಡರೆ ಸಮಾಜದ ಸ್ವಾಸ್ಥ್ಯ ಹಾಳಾಗದಂತೆ ಮಾಡಬಹುದು ಎಂದು ಹಲವು ದಾರ್ಶನಿಕರು ಹೇಳಿದರು. ಆದರೆ, ಬಸವಣ್ಣ 12ನೇ ಶತಮಾನದಲ್ಲಿಯೇ ತೋರಿಸಿಕೊಟ್ಟ ಈ ಹಾದಿ ಜಗತ್ತಿಗೆ ಮಾದರಿಯಾಗಿದೆ' ಎಂದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ವಕೀಲ ಸಿ.ಎಸ್.ದ್ವಾರಕಾನಾಥ್, 'ಬಸವಣ್ಣ ಅವರನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಿಸುವಂತೆ 2011ರಲ್ಲಿ ಒತ್ತಾಯ ಮಾಡಿದ್ದೆ. ಆ ನಂತರ ಪ್ರಯತ್ನ ನಡೆದರೂ ಘೋಷಣೆಯಾಗಿರಲಿಲ್ಲ. ಸಿದ್ದರಾಮಯ್ಯ ಅವರು 2024ರಲ್ಲಿ ಘೋಷಣೆ ಮಾಡಿ ಬಸವಣ್ಣನವರ ಭಾವಚಿತ್ರ ಸರ್ಕಾರಿ ಕಚೇರಿಗಳಲ್ಲಿ ಬಳಸುವಂತೆ ಆದೇಶ ಮಾಡಿದರು. ಇಂತಹ ಯೋಚನೆಗೆ ಬಲ ತುಂಬಿದ ಸಿದ್ದರಾಮಯ್ಯ ಅಭಿನಂದನಾರ್ಹರು' ಎಂದರು.

ನಿವೃತ್ತ ಜಿಲ್ಲಾ ನ್ಯಾಯಾಧೀಶ ಎಸ್.ಎಂ.ಕೆಂಪಗೌಡರ್ ಮಾತನಾಡಿ, 'ಕೆಲವೊಮ್ಮೆ ನಮ್ಮ ಸಮುದಾಯದವರೇ ಉನ್ನತ ಹುದ್ದೆಯಲ್ಲಿದ್ದಾಗ ಸಮಾಜದ ಪರ ಬೇಡಿಕೆ ಇಟ್ಟಾಗ ನಿರ್ಧಾರಗಳು ತ್ವರಿತವಾಗಿ ಆಗುವುದಿಲ್ಲ. ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದಾಗ ಪ್ರಮುಖ ನಿರ್ಧಾರ ಕೈಗೊಂಡರು. ಬಸವಣ್ಣನನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಿಸಿದ್ದು, ಮಹಿಳಾ ವಿಶ್ವವಿದ್ಯಾಲಯಕ್ಕೆ ಅಕ್ಕಮಹಾದೇವಿ ಹೆಸರು ಇಟ್ಟಿದ್ದು, ಅನುಭವ ಮಂಟಪ ಅಭಿವೃದ್ಧಿ, ಕಿತ್ತೂರು ಚನ್ನಮ್ಮ ಉತ್ಸವ, ಕಿತ್ತೂರಿಗೆ ಚನ್ನಮ್ಮನ ಹೆಸರು ಇಟ್ಟಿದ್ದು ಪ್ರಮುಖವಾದವು' ಎಂದು ಹೇಳಿದರು.

ಬೇಲಿಮಠದ ಶಿವರುದ್ರ ಸ್ವಾಮೀಜಿ, ನಿವೃತ್ತ ಐಎಎಸ್ ಅಧಿಕಾರಿ ಎಸ್.ಎಂ.ಜಾಮದಾರ್, ಮಾಜಿ ಮೇಯರ್ ಗಂಗಾಂಬಿಕೆ ಮಲ್ಲಿಕಾರ್ಜುನ, ಮಹಾಸಭಾ ಬೆಂಗಳೂರು ನಗರ ಅಧ್ಯಕ್ಷ ವೀರಭದ್ರಯ್ಯ, ಪ್ರಧಾನ ಕಾರ್ಯದರ್ಶಿ ಕೃಪಾ ಶಂಕರ್ ಉಪಸ್ಥಿತರಿದ್ದರು.

# ಸಿದ್ದರಾಮಯ್ಯ ದೇಶಕ್ಕೆ ಮಾದರಿ ನಾಯಕ: ಬಸವರಾಜ ಹೊರಟ್ಟಿ

ಮೈಸೂರು, ಜೂ.1: ಮುಖ್ಯಮಂತ್ರಿ ಸ್ಥಾನ ಹಸ್ತಾಂತರದ ವೇಳೆ ಸಿದ್ದರಾಮಯ್ಯ ಅವರು ಶ್ರೇಷ್ಠ ಸಂಪ್ರದಾಯ ಅನುಸರಿಸಿ ದೇಶಕ್ಕೆ ಮಾದರಿಯಾದರು ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದ್ದಾರೆ.

ಭಾರತೀ ಪ್ರಕಾಶನದ ವತಿಯಿಂದ ಕಿರುರಂಗಮಂದಿರದಲ್ಲಿ ಸೋಮವಾರ ಆಯೋಜಿಸಿದ್ದ ಹಿರಿಯ ಪತ್ರಕರ್ತ ಕೂಡ್ಲಿ ಗುರುರಾಜ ಅವರ ಸಾಧನೆಯ ಶಿಖರಗಳು ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ಅವರು, ಸಿದ್ದರಾಮಯ್ಯ ಕೊಟ್ಟ ಮಾತಿನಂತೆ ನಡೆದುಕೊಂಡು ಮೇಲ್ಪಂಕ್ತಿ ಹಾಕಿದ್ದಾರೆ. ಡಿ.ಕೆ. ಶಿವಕುಮಾರ್ ಸಿದ್ದರಾಮಯ್ಯ ಅವರ ಹಾದಿಯನ್ನು ಅನುಸರಿಸಬೇಕಾಗುತ್ತದೆ ಎಂದು ತಿಳಿಸಿದರು.

ರಾಜ್ಯದ ಅಧಿಕಾರ ಹಸ್ತಾಂತರದ



ಸಂದಿಗ್ದತೆಯ ಬಗ್ಗೆ ಮಾಧ್ಯಮದವರು ಪ್ರಶ್ನೆ ಕೇಳುತ್ತಾರೆ. ಸಭಾಪತಿಯಾಗಿ ರಾಜಕಾರಣದ ಬಗ್ಗೆ ಮಾತಾಡುವಂತಿಲ್ಲ ಎಂದರೂ ಬಿಡುವುದಿಲ್ಲ. ಆದರೆ, ಮಾಧ್ಯಮದವರ ಪ್ರಶ್ನೆಗೆ ಉತ್ತರಿಸುತ್ತೇನೆ. ಸಿಟ್ಟು ಮಾಡಿಕೊಳ್ಳುವುದಿಲ್ಲ ಎಂದರು.

1983ರಿಂದಲೂ ಸಿದ್ದರಾಮಯ್ಯ ನಾನು ಆತ್ಮೀಯ ಸ್ನೇಹಿತರು. ಸಿದ್ದರಾಮಯ್ಯನನ್ನು ಏಕವಚನದಲ್ಲಿ ಕರೆದಿದ್ದನ್ನು ಮಾಧ್ಯಮಗಳು ವಿವಾದ ಮಾಡಿದವು. ಆದರೆ, ಅಧಿಕಾರ ಇರುತ್ತೆ ಹೋಗುತ್ತದೆ. ಸಾಯುವ ತನಕ ನಾವಿಬ್ಬರು ಸ್ನೇಹಿತರು. ಏಕವಚನದ ಗೆಳೆಯರು ಎಂದು ನುಡಿದರು.

ಕಾಲ ಬದಲಾದಂತೆ ಪತ್ರಿಕಾ ರಂಗವೂ ಬದಲಾಗಿದೆ. ಪ್ರಜಾಪ್ರಭುತ್ವದಲ್ಲಿ ನಾಲ್ಕನೇ ಅಂಗ ಪತ್ರಿಕಾರಂಗ ಬಹಳ ಮಹತ್ವವಾದದ್ದು. ಕಟುವಾದ ಸತ್ಯ ಬರೆಯುವ ಕಾಲ ಬಂದಿದೆ. ಮಾಲಕರು ಏನು ಬರೆಯಬೇಕೆಂದು ನಿರ್ಧಾರ ಮಾಡುವ ಕಾಲದಲ್ಲಿಯೂ ನಿಜ ಸಂಗತಿ ಬಯಲಿಗೆಳೆಯುವ ಪತ್ರಕರ್ತರು ಇರುವುದು ಮೆಚ್ಚುವಂತದ್ದು ಎಂದು ತಿಳಿಸಿದರು.

ಲೇಖಕ ಪ್ರಕಾಶ್ ಬಾಬು ಪುಸ್ತಕ ಕುರಿತು ಮಾತನಾಡಿದರು. ವಿಧಾನ ಪರಿಷತ್ ಸದಸ್ಯ ಕೆ.ಶಿವಕುಮಾರ್, ಪತ್ರಕರ್ತ ಮದನ್ ಗೌಡ, ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಭಾರತೀ ಪ್ರಕಾಶನದ ಬಿ.ಎನ್.ಶ್ರೀನಿವಾಸ್, ಪತ್ರಕರ್ತ ಕೂಡ್ಲಿ ಗುರುರಾಜ್ ಇದ್ದರು.

> “ಬರಹಗಾರರಿಗೆ ಪತ್ರಿಕೆಗಳಲ್ಲಿ ಸ್ಪೇಸ್ ಇಲ್ಲ, ಫೇಸ್‌ಬುಕ್‌ನಲ್ಲಿ ಅನೇಕರು ಬರೆಯುತ್ತಿದ್ದಾರೆ. ಪ್ರಾಮಾಣಿಕರು ಪತ್ರಕರ್ತರಾಗಿ ಇರಲು ಕಷ್ಟ. ಪತ್ರಕರ್ತರ ಬಗ್ಗೆ ಕೆಲವು ರಾಜಕಾರಣಿಗಳಲ್ಲಿ ಮಿತ್ ಮತ್ತು ಅಹಂಕಾರ ಇದೆ. ಪತ್ರಕರ್ತರು ನಂಬಿಕೆ ಮತ್ತು ಗೌರವ ಉಳಿಸಿಕೊಳ್ಳುವ ಕಾಲಘಟ್ಟದಲ್ಲಿದ್ದೇವೆ.
>
> -ಡಾ.ಕೆ.ಶಿವಕುಮಾರ್,
> ವಿಧಾನ ಪರಿಷತ್ ಸದಸ್ಯ